ರಾಜ್ಯದಲ್ಲಿ ಅಭಿವೃದ್ಧಿ ಮಂಡಳಿಗಳು

206(242) ಶ್ರೀ ಬಸವನಗೌಡ ಆರ್.ಪಾಟೀಲ್ (ವಿಜಾಪುರ):
ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ಯಾವಾಗ ರಚಿಸಲಾಗಿದೆ;
(ಆ) ಅವುಗಳಿಗೆ ಇಲ್ಲಿಯವರೆಗೆ ನೀಡಲಾದ ಹಣವೆಷ್ಟು; ಪ್ರತ್ಯೇಕವಾಗಿ ಮಂಡಳಿಗಳಿಗೆ ನೀಡಲಾದ ಹಣವೆಷ್ಟು;
(ಇ) ಮುಂಬೈ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?
ಶ್ರೀ.ಸಿದ್ದ ರಾಮಯ್ಯ (ಉಪ ಮುಖ್ಯ ಮಂತ್ರಿಗಳು.)

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯನ್ನು 10.3.1992ರಂದು ರಚಿಸಲಾಗಿದೆ. ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯನ್ನು 26.10.95ರಿಂದ ರಚಿಸಲಾಗಿದೆ.

(ಆ) ಈ ಮಂಡಳಿಗಳಿಗೆ 31.1.97ರ ತನಕ ನೀಡಿದ ಅನುದಾನ 468.85ಕೋಟಿ ರೂ.ಗಳು. ಇದರಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 360.62ಕೋಟಿ ರೂ.ಗಳನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 104.50ಕೋಟಿ ರೂ.ಗಳನ್ನು ಹಾಗೂ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 3.73ಕೋಟಿ ರೂ.ಗಳನ್ನು ನೀಡಲಾಗಿದೆ.

(ಇ) ರಚಿಸಲಾಗಿಲ್ಲ. ಮುಂಬೈ ಕರ್ನಾಟಕ ಪ್ರದೇಶದ ಬಹುತೇಕ ತಾಲ್ಲೂಕುಗಳು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಗಡೀ ಪ್ರದೇಶಾಭಿವೃದ್ಧಿ ಯೋಜನೆ ಹಾಗೂ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಸೇರಿರುವುದರಿಂದ, ಪ್ರತ್ಯೇಕ ಮಂಡಳಿಯನ್ನು ರಚಿಸುವ ಅಗತ್ಯ ಕಂಡು ಬರುವುದಿಲ್ಲ.

ರಾಜ್ಯದ ಹೆದ್ದಾರಿಯಲ್ಲಿ ಅಪಘಾತ ಚಿಕಿತ್ಸಾ ಘಟಕಗಳನ್ನು ತೆರೆಯುವುದು.

221 (280) ಶ್ರೀ ಸಿ. ಚೆನ್ನಿಗಪ್ಪ, (ಕೊರಟಗೆರೆ):
ಮಾನ್ಯ ಸಾರಿಗೆ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?
(ಅ) ರಾಜ್ಯದಲ್ಲಿರುವ ಅಪಘಾತ ಚಿಕಿತ್ಸಾ ಘಟಕಗಳು ಎಷ್ಟು;
(ಆ) 1995-96ನೇ ಸಾಲಿನಲ್ಲಿ ಅಪಘಾತಕ್ಕೀಡಾದವರ ಸಂಖ್ಯೆ ಎಷ್ಟು;
(ಇ) ತುಮಕೂರು-ಬೆಂಗಳೂರು ರಸ್ತೆಯ ಹೆದ್ದಾರಿಯಲ್ಲಿ ಅಪಘಾತಕ್ಕೀಡಾದ (1-1-96 ರಿಂದ ಇಲ್ಲಿಯವರೆಗೆ) ಎಷ್ಟು ಜನರಿಗೆ ಪರಿಹಾರ ನೀಡಿದೆ;
(ಈ) ಇನ್ನು ಎಷ್ಟು ಜನರಿಗೆ ಪರಿಹಾರ ನೀಡಬೇಕಾಗಿದೆ. ಪರಿಹಾರ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು)

(ಅ) ರಾಜ್ಯದಲ್ಲಿ ಪ್ರತ್ಯೇಕ ಅಪಘಾತ ಚಿಕಿತ್ಸಾ ಘಟಕಗಳು ಇರುವುದಿಲ್ಲ.

(ಆ) 14,925

(ಇ) ತುಮಕೂರು ಜಿಲ್ಲೆಯಲ್ಲಿ ತುಮಕೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದಿನಾಂಕ: 1-1-96 ರಿಂದ ಇಲ್ಲಿಯವರೆಗೆ ಅಪಘಾತವಾಗಿ ವಾಹನ ಪತ್ತೆಯಾಗದ ಪ್ರಕರಣಗಳಲ್ಲಿ (ಹಿಟ್ ಅಂಡ್ ರನ್ ಕೇಸಸ್) 3 ಜನರಿಗೆ ಪರಿಹಾರ ನೀಡಿದೆ.

(ಈ) ಅಪಘಾತಕ್ಕೀಡಾದ ಜನರಿಗೆ ನೀಡಬೇಕಾದ ಪರಿಹಾರ ನ್ಯಾಯಾಲಯಕ್ಕೆ ಸಂಬಂಧಪಟ್ಟಿರುತ್ತದೆ. ನ್ಯಾಯಾಲಯವೇ ಸಂಬಂಧಿಸಿದವರಿಗೆ ನೇರವಾಗಿ ಪರಿಹಾರ ನೀಡಲು ಆದೇಶವನ್ನು ಸಂಬಂಧಿಸಿದ ವಿಮಾ ಕಂಪನಿಗಳಿಗೆ ಆದೇಶ ನೀಡುತ್ತಿರುತ್ತದೆ.

ರಾಜ್ಯದಲ್ಲಿ ಭಾರಿ ನೀರಾವರಿ ಯೋಜನೆಗೆ ಒಳಪಡುವ ಪ್ರದೇಶ

216 (356) ಶ್ರೀ ಗಂಗಾಧರ ನಾಯಕ್ (ಮಾನ್ವಿ):

ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಭಾರಿ ನೀರಾವರಿ ಯೋಜನೆಗೆ ಒಳಪಡುವ ಪ್ರದೇಶವೆಷ್ಟು, ಅದರಲ್ಲಿ ನೀರಾವರಿ ಸೌಲಭ್ಯ ಪಡೆದಿರುವ ಜಮೀನು ಎಷ್ಟು;

(ಆ) ಈ ಯೋಜನೆಗಳಿಗೆ ತಗಲುವ ವೆಚ್ಚ ಎಷ್ಟು? (ಯೋಜನಾವಾರು ವಿವರ ನೀಡುವುದು) ಯೋಜನೆಗಳ ಸೌಲಭ್ಯ ಪಡೆಯುವ ರೈತರಿಂದ ರಾಜ್ಯಕ್ಕೆ ಬರುವ ಆದಾಯವೆಷ್ಟು;

(ಇ) ರಾಜ್ಯದಲ್ಲಿ ಎಷ್ಟು ಭಾರಿ ನೀರಾವರಿ ಯೋಜನೆಗಳಿವೆ. ಅದರಲ್ಲಿ ಎಷ್ಟು ಪೂರ್ಣಗೊಂಡಿವೆ. ಪೂರ್ಣಗೊಳ್ಳದಿರುವ ಪ್ರಾರಂಭವಾಗಬೇಕಾಗಿರುವ ಯೋಜನೆಗಳ ವಿವರ ನೀಡುವುದು.

(ಈ) ಪ್ರತಿಯೊಂದು ಯೋಜನೆಗೆ ತಗಲುವ ವೆಚ್ಚವೆಷ್ಟು? ಅಪೂರ್ಣವಾಗಿರುವ ಯೋಜನೆಗಳಿಗೆ ಬೇಕಾಗಿರುವ ಹಣದ ಪ್ರಮಾಣವೆಷ್ಟು, ಖರ್ಚು ಮಾಡಿರುವ ಹಣ ಎಷ್ಟು; ಯೋಜನೆಗಳು ಮಂಜೂರಾಗಿ ಕಾಮಗಾರಿಗಳು ಪೂರ್ಣವಾಗದೆ ಇರುವ ಯೋಜನೆಗಳಾವುವು? ಅವುಗಳಿಗೆ ತಗಲುವ ವೆಚ್ಚ ಎಷ್ಟು?

ಶ್ರೀ ಕೆ.ಎಸ್.ನಾಗೇಗೌಡ (ಭಾರಿ ನೀರಾವರಿ ಸಚಿವರು.)

(ಅ) (1) ಭಾರಿ ನೀರಾವರಿ ಯೋಜನೆಗೆ ಒಳಪಡುವ ಪ್ರದೇಶ 27.10 ಲಕ್ಷ ಹೆಕ್ಟೇರ್‌ಗಳು.

(2) ನೀರಾವರಿ ಸೌಲಭ್ಯ ಕಲ್ಪಿಸಲಾದ ಜಮೀನು 14.72 ಲಕ್ಷ ಹೆಕ್ಟೇರ್‌ಗಳು.

(ಆ) (1) ಯೋಜನೆಗೆ ತಗಲುವ ವೆಚ್ಚ 14594.17 ಕೋಟಿ ರೂಗಳು.

(2) ಈ ಯೋಜನೆಗಳಿಂದ ಕಳೆದ 3 ವರ್ಷಗಳಲ್ಲಿ ಎತ್ತಲಾದ ನೀರಿನ ಬೇಡಿಕೆಯ ಸರಾಸರಿ 55.50 ಕೋಟಿ ರೂಗಳು.

(ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧ-1ರಲ್ಲಿ ನೀಡಲಾಗಿದೆ)